# ಮಾತೃಸ್ಮೃತಿಯ ಸುಧೆ

ಬಂಗಾಳಿ ಮೂಲ: **ಸ್ವಾಮಿ ವಾಸುದೇವಾನಂದ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ - ೨

'ಉದ್ಬೋಧನ'ದಲ್ಲಿ ಒಂದು ದಿನ ನಾನು ಪೂಜೆ ಮಾಡುತ್ತಿದ್ದೆ. ಬಾಣೇಶ್ವರ ಶಿವನಿಗೆ ಅಭಿಷೇಕ ಮಾಡುವಾಗ, ಶಿವಲಿಂಗವು ನನ್ನ ಕೈಯಿಂದ ಜಾರಿ ಉರುಳಿ ಹೋಯಿತು. ನಾನು ಆತಂಕಗೊಂಡು, ಎದ್ದು ಓಡಿ ಹೋಗಿ, ಅದನ್ನು ತೆಗೆದುಕೊಂಡು ಬಂದು, ಮೊದಲಿದ್ದಲ್ಲಿ ಅಂದರೆ, ಗೌರೀಪೀಠದಲ್ಲಿ ಸ್ಥಾಪನೆ ಮಾಡಿದೆ. ಮರುದಿನ ಬೆಳಿಗ್ಗೆ ರಾಮಕೃಷ್ಣಪುರದಿಂದ ನೀರದ್ ಮಹಾರಾಜರ (ಸ್ವಾಮಿ ಅಂಬಿಕಾನಂದ) ತಾಯಿ[೧] ಬಂದು ಹೇಳಿದರು: ''ಮಗೂ, ನಿನ್ನೆ ನೀನು ಮಹಾದೇವನಿಗೆ ಸ್ನಾನ ಮಾಡಿಸುವಾಗ, ನಿನ್ನ ಕೈಯಿಂದ ಶಿವಲಿಂಗ ಬಿದ್ದುಹೋಯಿತೆ?'' ನನಗೆ ನಾಚಿಕೆಯಾಯಿತು. ನಾನಂದೆ, ''ಅಮ್ಮಾ, ನಿಮಗೆ ಅದು ಹೇಗೆ ತಿಳಿಯಿತು?'' ಅದಕ್ಕೆ ಅವರೆಂದರು, ''ನಿನ್ನೆ ಕನಸಿನಲ್ಲಿ ಕಂಡೆ, ಐದು ವರ್ಷದ ಚುರುಕಾದ ಹುಡುಗ, ತಲೆಯಲ್ಲಿ ಸಣ್ಣ ಸಣ್ಣ ಜಟೆ, ಬೆತ್ತಲಾಗಿದ್ದ; ನಲಿಯುತ್ತಾ ಬಂದು ಹೇಳಿದ, ನನ್ನನ್ನು ಬಿಸಾಡಿ ಬಿಟ್ಟ ಅಂತ.'' ಆಗ ಶ್ರೀಮಾತೆ ಎದುರುಗಡೆ ಕುಳಿತು ಯಾರೊಂದಿಗೋ ಮಾತನಾಡುತ್ತಿದ್ದರು. ಆದರೆ ಅವರು ಎಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದರು. ನಾನು ಭಯಗೊಂಡು ಕೂಡಲೇ, 'ಗುರು ಕೃಪಾ ಹಿ ಕೇವಲಂ' ಎಂದು ಜಪಿಸತೊಡಗಿದೆ. ನನ್ನ ಎದೆಬಡಿತ ನನಗೇ ಕೇಳಿಸುತ್ತಿತ್ತು. ಶ್ರೀಮಾತೆಯವರು ನೀರದ್ ಮಹಾರಾಜರ ತಾಯಿಯ ಕಡೆಗೆ ನೋಡಿ ಹೇಳತೊಡಗಿದರು, ''ಚಿಕ್ಕ ಮಕ್ಕಳು ಆಟವಾಡಲು ಹೋಗಿ ಹೀಗೆ ಎಷ್ಟು ಬಾರಿ ಬಿದ್ದುಬಿಡುತ್ತಾರೆ!'' ನಂತರ ಬಾಣೇಶ್ವರ ಶಿವನ ಕಡೆಗೆ ನೋಡಿ ನಗುತ್ತ ಹೇಳಿದರು, ''ಅಪ್ಪಾ, ನೀನು ಅಷ್ಟಮೂರ್ತಿಗಳ ರೂಪದಿಂದ ಜಗತ್ತನ್ನೆಲ್ಲ ವ್ಯಾಪಿಸಿ ನಿಂತಿದ್ದೀಯಾ. ಇಷ್ಟು ಸಣ್ಣ ಹುಡುಗ ನಿನ್ನನ್ನು ಹೇಗೆ ಹಿಡಿದು ನಿಲ್ಲಿಸಬಲ್ಲ?'' ನಾನು ಮನಸ್ಸಿನಲ್ಲೇ ಅರ್ಥ ಮಾಡಿಕೊಂಡೆ, **''ಶಿವೇ ರುಷ್ಟೇ ಗುರುಸ್ತ್ರಾತಾ ಗುರೌ ರುಷ್ಟೇ ನ ಕಶ್ಚನ।''** ಯೋಗಿನ್ ಮಾ ಹೇಳಿದರು, ''ಈ ಕ್ಷಣದಿಂದ ಶಾಂತನಾಗು.'' ನಾನು ಮೂವರಿಗೂ ನಮಸ್ಕಾರ ಮಾಡಿದೆ. ನೀರದ್ ಮಹಾರಾಜರ ತಾಯಿ ನನಗೆ ಹೇಳಿದರು, (ನನ್ನ ಅಪರಾಧಕ್ಕಾಗಿ) ''ನಮ್ಮ ಬ್ರಾಹ್ಮಣರು ವೃಂದಾವನದಲ್ಲಿ ಚಾಮರ ಬೀಸುವುದು, ಚಂಡೀಪಾರಾಯಣ ಇವನ್ನು ಮಾಡುತ್ತಾರೆ.''

ಇನ್ನೊಂದು ಬಾರಿ, ಶ್ರೀಮಾತೆಯವರ ಹಲ್ಲುಜ್ಜುವ ಪುಡಿ ಖಾಲಿಯಾಗಿತ್ತು. ನೀರದ್ ಮಹಾರಾಜರ ತಾಯಿ ಬೆಳಿಗ್ಗೆ ಹಲ್ಲುಜ್ಜುವ ಪುಡಿಯೊಂದಿಗೆ ಹಾಜರಾಗಿದ್ದರು. ಅವರೆಂದರು, ''ನಿನ್ನೆ ಕನಸಿನಲ್ಲಿ ನೋಡಿದೆ, ಶ್ರೀಮಾತೆಯವರಿಗೆ ಹಲ್ಲುಜ್ಜುವ ಪುಡಿ ಬೇಕಿತ್ತು.'' ಅದನ್ನು ಅಲ್ಲಿದ್ದ ಎಲ್ಲರಿಗೂ ಹೇಳಿದಾಗ, ಅವರೆಲ್ಲ ನಗುತ್ತ, ''ಇಷ್ಟೊಂದು ವಸ್ತುಗಳಿರುವಾಗ, ಶ್ರೀಮಾತೆಯವರು ಹಲ್ಲುಜ್ಜುವ ಪುಡಿ ಬಯಸುತ್ತಾರೆ!'' ಅದಕ್ಕೆ ಶ್ರೀಮಾತೆ ಹೇಳಿದರು, ''ಹೌದು ಮತ್ತೆ, ನನ್ನ ಹಲ್ಲುಜ್ಜುವ ಪುಡಿ ಖಾಲಿಯಾಗಿಬಿಟ್ಟಿದೆ!''



'ಉದ್ಬೋಧನ'ದಲ್ಲಿ ಒಂದು ಸಲ ನಾವೆಲ್ಲ ಕೆಳ ಅಂತಸ್ತಿನಲ್ಲಿ ತುಂಬ ಗದ್ದಲ ಮಾಡುತ್ತಿದ್ದೆವು. ಅದನ್ನು ಕಂಡು ಗೋಲಾಪ್ ಮಾ ಶ್ರೀಮಾತೆಯವರಿಗೆ ಹೇಳಿದರು, ''ನಿಮಗೆ ನಿಮ್ಮ ಶಿಷ್ಯಂದಿರ ಮೇಲೆ ಏನೂ ನಿಯಂತ್ರಣವಿಲ್ಲ. ಪರಮಹಂಸರು ತಮ್ಮ ಶಿಷ್ಯಂದಿರನ್ನು ಎಷ್ಟು ಶಿಸ್ತಿನಿಂದ ಇಟ್ಟುಕೊಳ್ಳುತ್ತಿದ್ದರು! ಯಾರದೇ ಆಗಲಿ, ಒಂದು ಕೂದಲು ಕೂಡ ಆಕಡೆ-ಈಕಡೆ ಆಗುವುದಕ್ಕೆ ಅವಕಾಶವಿರುತ್ತಿರಲಿಲ್ಲ.'' ಅದಕ್ಕೆ ಶ್ರೀಮಾತೆಯವರೆಂದರು, ''ನಿನಗೆ ಗೊತ್ತೇನಮ್ಮಾ, ನನಗೆ ಯಾರ ದೋಷವನ್ನೂ ನೋಡಲಾಗುತ್ತಿಲ್ಲ. ಇನ್ನು ನಿಯಂತ್ರಣ ಮಾಡುವುದು ಹೇಗೆ? ನಾನು

೧ ಶ್ರೀರಾಮಕೃಷ್ಣರ ಒಬ್ಬರು ಗೃಹಸ್ಥ ಭಕ್ತರಾದ ನವಗೋಪಾಲ ಘೋಷ್ ಅವರ ಪತ್ನಿ, ನಿಸ್ತಾರಿಣೀ ಘೋಷ್. *(-ಸಂ)*

ಯಾರಮ್ಮಾ! ನಾನು ಹೇಗೆ ನಿಯಂತ್ರಿಸಲಿ? ಇವರು ಠಾಕೂರರ ಮಕ್ಕಳು. ನಿಯಮ ಮಾಡುತ್ತೇನೆ ಎಂದು ಹೇಳಿದರೇ ಸಾಕು! ಅವರು ಹೇಗೆ ಎಲ್ಲವನ್ನೂ ಸರಿಪಡಿಸುತ್ತಿದ್ದರು! ಎಲ್ಲವನ್ನೂ ಆತ್ಮೀಯತೆ, ಪ್ರೀತಿಯಿಂದ ಸರಿಪಡಿಸುತ್ತಿದ್ದರು. ನಮ್ಮ ಭಗವಂತ, ಪ್ರೀತಿಯ ಠಾಕೂರ್. ಆದ್ದರಿಂದಲೇ ಯಾವುದೇ ಕಠೋರತೆ, ಒರಟು ಭಾವನೆಗಳಿಲ್ಲ. ಜನರು ಹೇಳುತ್ತಾರೆ, 'ಆಗಲಿ, ಭಗವಂತನೇ ಇದರ ಫಲವನ್ನು ನೀಡುತ್ತಾನೆ' ಅಂತ; ಆಗ ನಾನು ಠಾಕೂರರ ಬಳಿ ಪ್ರಾರ್ಥಿಸುತ್ತೇನೆ, 'ಠಾಕೂರ್, ಅರಿತವರಾಗಲಿ, ಅರಿಯದವರಾಗಲಿ – ಎಲ್ಲರಿಗೂ ಮಂಗಳವನ್ನೇ ಉಂಟು ಮಾಡಿ' ಅಂತ. ನಾನು ಶಿಷ್ಯಂದಿರಿಗೆ ಹೇಳುತ್ತೇನೆ, 'ಯಾರಿಗೂ ಹಿಂಸೆ ಮಾಡಬೇಡಿ, ಭಗವಂತನಿಗೂ ಕೂಡ ವಿಚಾರ ಮಾಡಲು ಹೇಳಬೇಡಿ. ಬದಲಾಗಿ, ದುಷ್ಟರಿಗೂ ಕೂಡ ಯಾವುದರಿಂದ ಒಳ್ಳೆಯದಾಗುವುದೋ, ಅದಕ್ಕಾಗಿ ಪ್ರಾರ್ಥನೆ ಮಾಡಿ. ಭಗವಂತನ ವಿಚಾರವೆಂದರೆ ಕರಾರುವಾಕ್ಕು, ಒಂದಿಷ್ಟು ಕೂಡ ಆಕಡೆ-ಈಕಡೆ ಆಗದು. ಆದರೆ ಅವನ ದಯೆಗೂ ಕೂಡ ಕೊನೆ ಎಂಬುದಿಲ್ಲ.''

ಶ್ರೀಮಾತೆಯವರ ಈ ಉಪದೇಶಗಳಿಗೆ ಹೋಲಿಸಿದರೆ, ಬೈಬಲ್ಲಿನಲ್ಲಿ ನಾವು ಓದುವ ಮಾತುಗಳೂ ಅಲ್ಪವೆನಿಸುವವು: — ''Vengeance is mine; I will repay, saith the Lord'' [Romans, 12.19] "Say not, I will do so to him as he hath done to me" *(Proverbs, 24.29)* ಆದರೆ ಭಗವಾನ್ ಯೇಸುಕ್ರಿಸ್ತ ಹೇಳಿದ್ದ: ''Father, forgive them; for they know not what they do."*( St. Luke, 23.34)* "For the Son of man is not come to destroy men's lives, but to save them" *(Ibid., 9.56)*

ಒಂದು ಸಲ ಕೆಲವರು ಯಾರೋ ಒಬ್ಬರ ಬಗ್ಗೆ ಸುಳ್ಳು ಸುದ್ದಿಯನ್ನು ಹಬ್ಬಿಸುತ್ತಿದ್ದರು. ಶ್ರೀಮಾತೆಯವರು ಅದನ್ನು ಕೇಳಿ ರಾಸಬಿಹಾರಿ ಅಣ್ಣನಿಗೆ ಹೇಳಿದರು, ''ಅವನಿಗೆ ನೀರಿನ ಟ್ಯಾಂಕಿನಿಂದ ನೀರು ತುಂಬಿ ಅವರ ಮೇಲೆ ಚೆಲ್ಲಲು ಹೇಳು, ಇಲ್ಲದಿದ್ದರೆ ಅವರು ಸುಟ್ಟು ಬೂದಿಯಾಗಿಬಿಟ್ಟಾರು!''

ಒಬ್ಬ ತುಂಬಾ ಚಂಚಲ ಸ್ವಭಾವದವನು. ಶ್ರೀಮಾತೆ ಅವನಿಗೆ ತುಸು ಸ್ಥಿರವಾಗಿ ಇದ್ದುಕೊಂಡು ಧ್ಯಾನ ಜಪ ಮಾಡಲು ಹೇಳಿದರು. ಅವನು ಹೇಳಿದ, ''ಅಮ್ಮಾ, ಮನಸ್ಸು ಸ್ಥಿರವಾಗುತ್ತಿಲ್ಲ ಎಂದಾದ ಮೇಲೆ ಏನು ಮಾಡಲಿ?'' ಶ್ರೀಮಾತೆ ಹೇಳಿದರು, ''ಧ್ಯಾನ ಕಷ್ಟದ ಕೆಲಸ. ನಾವು ಹೆಣ್ಣುಮಕ್ಕಳು ಜಪ ಮಾಡುವುದರಿಂದಲೇ ನಮಗೆ ಎಲ್ಲವೂ ಲಭಿಸುವುದು. ನೀನೂ ಹಾಗೆಯೇ ಮಾಡು. ಸ್ಥಿರವಾಗಿ ಕುಳಿತು ಜಪಮಾಡಬೇಕು. ಪ್ರತಿದಿನವೂ ಹತ್ತು-ಇಪ್ಪತ್ತು ಸಾವಿರ ಜಪ ಮಾಡಿ ನೋಡು; ಮನಸ್ಸು ತಾನೇ ತಾನಾಗಿ ನಿಯಂತ್ರಣಕ್ಕೆ ಬರುವುದಿಲ್ಲವೋ ನೋಡು. ಒಂದು ವೇಳೆ ಬರದಿದ್ದರೆ ಆಗ ಹೇಳು. ಸಾಧು, ಸಂನ್ಯಾಸಿಗಳಿಗಲ್ಲದೆ ಇತರರಿಗೆ ಧ್ಯಾನ ಮಾಡುವುದು ಅತ್ಯಂತ ಕಷ್ಟ. ಆದರೂ, ಕೇವಲ ಗಂಡಸಾಗಿದ್ದರೆ ಸಾಲದು, ಮನಸ್ಸಿಗೆ ಹೆಚ್ಚಿನ ಶಕ್ತಿಯೂ ಅಗತ್ಯ, ವೈರಾಗ್ಯವಿರಬೇಕು. ನಿರ್ವಾಸನೆ ಹಾಗೂ ಭಗವಂತನಲ್ಲಿ ಪ್ರೀತಿ ಇಲ್ಲದಿದ್ದರೆ ಧ್ಯಾನವುಂಟಾಗುವುದು ಅತ್ಯಂತ ಕಠಿಣ. ನಾಲ್ಕು ಬಗೆಯ ಧ್ಯಾನಸಿದ್ಧರಿದ್ದಾರೆ: ೧) ಜನ್ಮತಃ ಒಳ್ಳೆಯ ಸಂಸ್ಕಾರವನ್ನು ಪಡೆದುಕೊಂಡವರು. ೨) ಗುರುವಿನ ಬಳಿ ಶಿಷ್ಯತ್ವ ಸ್ವೀಕರಿಸಿ, ಹಲವು ಬಗೆಯ ಅಭ್ಯಾಸಗಳನ್ನು ಮಾಡಿ ಧ್ಯಾನಸಿದ್ಧರಾದವರು. ೩) ಮತ್ತೆ ಠಾಕೂರ್ ಹೇಳಿದಂತೆ – ಕೃಪಾಸಿದ್ಧರು. ಗುರು ಕೃಪೆಯನ್ನು ಹರಿಸಿ, ಅವರನ್ನು ಸಂಸಾರದಿಂದ ಮೇಲೆತ್ತುತ್ತಾರೆ. ಇವರೇ ಕೃಪಾಸಿದ್ಧರು. ಹಾಗೂ, ೪) ಠಾಕೂರರು 'ಹಠಾತ್ ಸಿದ್ಧ' ಎಂದು ಹೇಳುತ್ತಿದ್ದರು. ಜನಸಾಮಾನ್ಯರು ಯಾವುದೋ ಕಾರಣದಿಂದ ಇತರರ ಸಂಪತ್ತನ್ನು ಪಡೆದ ಹಾಗೆ ಇದು. ಅವರೂ ಹಿಂದೆ ತಪಸ್ಸು ಮಾಡಿದ್ದಿರಬೇಕು. ಯಾವುದೋ ಮೋಹಕ್ಕೆ ಬಲಿಬಿದ್ದು, ತಮ್ಮ ಪ್ರಾರಬ್ಧ ಕರ್ಮವನ್ನು ಅನುಭವಿಸಬೇಕಾಯಿತು; ಆ ಪ್ರಾರಬ್ಧ ಈಗ ಕಳೆದು ಹೋಗಿದೆ. ರಸ್ತೆಯಲ್ಲಿ ಹೋಗುತ್ತಿದ್ದಂತೆ ಅತ್ಯಂತ ಅಮೂಲ್ಯವಾದ ಮಾಣಿಕ್ಯವೊಂದು ಅವರಿಗೆ ಸಿಕ್ಕಿದಂತಾಗಿದೆ.

''ಠಾಕೂರರು ಈ ಬಾರಿ ದಯೆ ತೋರಿ, ಜನರ ಕಲ್ಯಾಣಕ್ಕಾಗಿ ಕಠೋರ ತಪಸ್ಸು ಮಾಡಿ ಹೊರಟುಹೋದರು. ಅವರು ಬರಿ ಮೂಳೆ, ಚರ್ಮವಾಗಿಬಿಟ್ಟಿದ್ದರು, ಅದರ ಮೇಲಿಂದ ಜನರ ಪಾಪಗಳನ್ನು ಸ್ವೀಕರಿಸಿ ಅವರು ರೋಗವನ್ನು ಅನುಭವಿಸಬೇಕಾಯಿತು. ಆದ್ದರಿಂದಲೇ ಅವರಲ್ಲಿ ಭಕ್ತಿ, ಶ್ರದ್ಧೆ, ವಿಶ್ವಾಸಗಳನ್ನು ಬೆಳೆಸಿಕೊಂಡರೆ, ಅವರ ನಾಮಜಪ, ಅವರ ಜೀವನ ಲೀಲೆಯ ಚಿಂತನೆ ನಡೆಸಿದರೆ ಸಾಕು, ಕುಂಡಲಿನೀಶಕ್ತಿಯು ತಾನೇತಾನಾಗಿ ಜಾಗೃತವಾಗುವುದು; ಸ್ವಲ್ಪ ಕಠೋರ ಅಭ್ಯಾಸ ಅಗತ್ಯವಾದುದು. ಇದು ಕಲಿಯುಗ — ಈಗ ಸತ್ಯಯುಗ, ತ್ರೇತಾಯುಗದಂತೆ ಜನರಿಗೆ ತಪಸ್ಸು ಮಾಡಲಾಗುವುದೆ? ಈ ಯುಗದಲ್ಲಿ ಅನ್ನಗತ ಪ್ರಾಣ. ಠಾಕೂರರ ನಾಮಜಪ ಮಾಡು; ಅವರೇ ಅನ್ನ, ಬಟ್ಟೆಗಳಿಗೆ ಎಲ್ಲ ವ್ಯವಸ್ಥೆ ಮಾಡುವರು. ಈ ಬಾರಿ ಠಾಕೂರರ ನಾಮಜಪ ಮಾಡಿದರೆ ಯಾರಿಗೂ ಎಂದಿಗೂ ಅನ್ನಕ್ಕೆ ತೊಂದರೆಯಾಗದು. ಒಳ್ಳೆಯ ಅನ್ನ, ಒಳ್ಳೆಯ ಬಟ್ಟೆಗೆ ಅವರೇ ವ್ಯವಸ್ಥೆ ಮಾಡಿ ಹೋಗಿದ್ದಾರೆ. ಗುರು, ಈಶ್ವರ ಇವರ ಸಹಾಯವಿಲ್ಲದೆ ಯಾರಾದರೂ ತಾವೇತಾವಾಗಿ ಬಂಧನದಿಂದ ಬಿಡಿಸಿಕೊಳ್ಳಬಲ್ಲರೆ? ಅದಕ್ಕಾಗಿಯೇ ಠಾಕೂರರು ಅತ್ಯಂತ ಕಠೋರವಾದ ತಪಸ್ಸನ್ನಾಚರಿಸಿ, ಅದರ ಫಲವನ್ನು ಮುಂದೆ ಬರುವ ಭಕ್ತರಿಗಾಗಿ ಸಂಚಯನ ಮಾಡಿಟ್ಟು ಹೋಗಿದ್ದಾರೆ. ಅವರು ಕೃಪೆ ತೋರಿ ಬಾಗಿಲ ಬಳಿ ನಿಂತಿದ್ದಾರೆ; ನೀನು ಬಾಗಿಲನ್ನು ತೆರೆಯುವ ಕೆಲಸವನ್ನು ಮಾತ್ರವೇ ಮಾಡಬೇಕು.''

ಒಂದು ಬಾರಿ ಭಗವಂತ ಅವತರಿಸಿದ; ಸತ್ಯಕ್ಕಾಗಿ ದುಃಖ ಪಡದೆ ಅವನು ಶಿಲುಬೆಗೇರಿ, ಜೀವರುಗಳ ಪಾಪದ ಪ್ರಾಯಶ್ಚಿತ್ತ ಹೊಂದಲು ತನ್ನ ತ್ಯಾಗದ ಫಲವನ್ನು ಇಲ್ಲೇ ಬಿಟ್ಟು ಹೋದ

ನೆಂದು ವಿಶ್ವಾಸಿಗಳಾದ ಭಕ್ತಜನರು ಭಾವಿಸಿದರು. ಯಾರು ಯೇಸುಕ್ರಿಸ್ತನಲ್ಲಿ ವಿಶ್ವಾಸ ಹೊಂದುವರೋ, ಅವರು ಆ ಕ್ಷಣ ದಲ್ಲೇ ಭಗವಂತನ ಕ್ಷಮೆಗೆ ಪಾತ್ರರಾಗುವರು, ಹಾಗೂ ಪಾಪ ಗಳಿಂದ ಮುಕ್ತರಾಗುವರು. ಈ ಬಾರಿ ಭಗವಂತನ ಕಠೋರ ತಪಸ್ಸು, ಸಾಧನೆ-ಭಜನೆ ಎಲ್ಲವೂ ಭಕ್ತರಿಗಾಗಿ ಹಾಗೂ ಜ್ಞಾನ ಪಿಪಾಸುಗಳಾದ ಸಾಧಕರಿಗಾಗಿ. ಭಗವಂತನ ಮಾತು ಈಗಲೂ ಪ್ರತಿಧ್ವನಿಸುತ್ತಿದೆ. ಆಸ್ತಿಕ ಭಕ್ತರ ಸಾಧಾರಣ ಸಾಧನೆ-ಭಜನೆ, ರಾಮಕೃಷ್ಣ ನಾಮಶ್ರವಣಗಳಿಂದ ತಾನಾಗಿಯೇ ಅವರಲ್ಲಿ ಕುಂಡ ಲಿನಿ ಜಾಗೃತವಾಗುವುದು. ಬೆಳಗಾಗಿದೆ, ಎಚ್ಚರಗೊಳ್ಳಿ. ಬಾಗಿಲು ತೆರೆದು ನೋಡಿ, ಎದುರಿಗೇ ಸೂರ್ಯ ನಿಂತಿದ್ದಾನೆ!

ಒಂದು ಸಲ ನನಗೆ ಇನ್‌ಫ್ಲುಯೆಂಜಾ ಬಂತು. ಶ್ರೀಮಾತೆ ಯವರಿಗೆ ಹೇಳಿದೆ, ''ಸಾಧಾರಣವಾಗಿಯೇ ನನಗೆ ಮನಸ್ಸು ಸ್ಥಿರವಾಗದು. ಅಂತಹದರಲ್ಲಿ , ದೇಹಾರೋಗ್ಯ ಕೆಟ್ಟುಹೋದರೆ ಮನಸ್ಸು ಒಂದೆಡೆ ಸ್ಥಿರವಾಗುತ್ತಲೇ ಇಲ್ಲ.'' ಅದಕ್ಕೆ ಶ್ರೀಮಾತೆ ಹೇಳಿದರು, ''ನೋಡು, ಮನಸ್ಸನ್ನು ಎರಡು ಭಾಗ ಮಾಡ ಬೇಕು. ಒಂದು ವಿವೇಕಿ ಎಂಬಂತೆ, ಇನ್ನೊಂದು ಅವಿವೇಕಿ ಎಂಬಂತೆ – ಮಕ್ಕಳ ಹಾಗೆ ವಿವೇಕಿ ಮನಸ್ಸು ತಾಯಿ ತಂದೆಯರ ಹಾಗೆ, ಯಾವಾಗಲೂ ಅವಿವೇಕಿ ಮನಸ್ಸಿನ ಹಿಂದೆ ಬೀಳಬೇಕು. ಒಂದಿಷ್ಟು ಹೆಚ್ಚುಕಡಿಮೆಯಾದರೂ, ಅದನ್ನು ನಿಯಂತ್ರಿಸ ಬೇಕು, ಬಯ್ಯಬೇಕು. ನೀನು ನೋಡಿಲ್ಲವೇ – ತಂದೆ ತಾಯಿ ಗಳು ತುಂಟ ಮಕ್ಕಳನ್ನು ಹೇಗೆ ಬೈದು ನಿಯಂತ್ರಿಸುತ್ತಾರೆ ಅಂತ? ಹೀಗೆ ಕೆಲವು ದಿನ ಅಭ್ಯಾಸ ಮಾಡಿದರೆ ಸಾಕು, ಮನಸ್ಸು ಹತೋ ಟಿಗೆ ಬರುವುದನ್ನು ನೀನು ನೋಡುವೆ. ಆದರೆ, ಅವಿವೇಕಿ ಮನಸ್ಸಿನಲ್ಲಿ ಒಂದು ವಿಷಯದ ಮೇಲೆ ಅನೇಕ ದಿನಗಳ ಅಭ್ಯಾಸ ದಿಂದಾಗಿ ದೃಢಸಂಸ್ಕಾರವಾಗಿಬಿಟ್ಟಿದ್ದರೆ, ನೂರು ಬಾರಿ ಅದನ್ನು ತಿರಸ್ಕಾರ ಮಾಡಿದರೂ, ಅದು ಹೋಗಲಿಚ್ಛಿಸದು. ಆಗ ದುರ್ಬಲ ಮನಸ್ಸಿಗೋಸ್ಕರ ಠಾಕೂರರ ಬಳಿ ಪ್ರಾರ್ಥನೆ ಮಾಡಿಕೋ. ಅದ ಲ್ಲದೆ ಬೇರೆ ಯಾವುದೇ ದಾರಿಯಿಲ್ಲ. ಅವರೇ ಈಶ್ವರ, ಎಲ್ಲ ವನ್ನೂ ಮಾಡಲು ಸಮರ್ಥರು. ಅವರು ಒಂದು ಅಚ್ಚನ್ನು ಒಡೆದು ಹಾಕಿ, ಇನ್ನೊಂದು ಹೊಸ ಅಚ್ಚನ್ನು ನಿರ್ಮಿಸಬಲ್ಲರು. ಠಾಕೂರರ ಇಚ್ಛಾಶಕ್ತಿಯ ಮುಂದೆ ಮನುಷ್ಯರ ಮನಸ್ಸುಗಳು ಹಸಿ ಮಣ್ಣಿನ ಮುದ್ದೆಯಂತೆ ಆಗಿಬಿಡುತ್ತಿದ್ದುದನ್ನು ನಾನು ನೋಡಿ ದ್ದೇನೆ. ಅವರು ಯಾರನ್ನು ಹೇಗೆ ಮಾಡಬೇಕೆಂದು ಬಯಸು ತ್ತಿದ್ದರೋ, ಹಾಗೇ ತಯಾರು ಮಾಡುತ್ತಿದ್ದರು.''

ಒಂದು ದಿನ 'ಉದ್ಬೋಧನ'ದಲ್ಲಿ ಶಕ್ತಿತತ್ತ್ವದ ಬಗ್ಗೆ ಚರ್ಚೆ ನಡೆಯುತ್ತಿತ್ತು. ಒಬ್ಬ ಬಂದು ಹೇಳಿದ: ''ಮಹಾಶಯರೆ, ಇದ ನ್ನೆಲ್ಲ ಬಿಟ್ಟುಬಿಡಿ. ಠಾಕೂರರ ಉಪದೇಶಗಳನ್ನು ಸ್ವಲ್ಪ ಹೇಳಿ, ಕೇಳುತ್ತೇವೆ.'' ಆಗ ಯೋಗಿನ್-ಮಾ ಸ್ನಾನ ಮಾಡಿ ತಮ್ಮ ಕೋಣೆಗೆ ಹೋಗುತ್ತಿದ್ದರು. ಅವರೆಂದರು, ''ಠಾಕೂರರ ಉಪ ದೇಶಗಳ ಬಗ್ಗೆ ಹೇಳಹೊರಟರೆ ಸಾಕು, ಶಕ್ತಿತತ್ತ್ವ ಅಲ್ಲಿ ಬಂದೇ ಬಿಡುತ್ತದೆ. ಅವರು ಯಾವಾಗ ತೀವ್ರ ವ್ಯಾಕುಲತೆಯಿಂದ ಕಾಳೀ ಮಂದಿರದ ಖಡ್ಗವನ್ನು ತಮ್ಮ ಕತ್ತಿನ ಮೇಲಿಟ್ಟು, ''ನೀನು ನನಗೆ ದರ್ಶನ ಕೊಡದಿದ್ದರೆ ಈ ಕತ್ತನ್ನೇ ಬಲಿಕೊಡುತ್ತೇನೆ'' ಎಂದು ಹೇಳಿದರೋ, ಆಗ ಕಾಳೀಮಾತೆ ಥಟ್ಟನೆ ಪ್ರತ್ಯಕ್ಷವಾಗಿಬಿಟ್ಟಳು. ಜಗತ್ತನ್ನು ಆವರಿಸಿದ ತೆರೆಯೆಲ್ಲ ಸರಿದುಹೋಯಿತು- ಎಲ್ಲವೂ ಚಿನ್ಮಯ! ಕೇವಲ ಮೂರ್ತಿಯಷ್ಟೇ ಅಲ್ಲ, ಕೋಶ-ಕುಶಿ[೨] ವರೆಗೆ ಎಲ್ಲವೂ ಕೂಡ.'' ನಾನಂದೆ, ''ಒಂದು ದಿನ ಮಹಾಪುರುಷ ಮಹಾರಾಜರು ಹೇಳಿದರು, ಒಂದು ದಿನ ಅವರು ಹಾಗೂ ಮಹಾರಾಜ್ (ಸ್ವಾಮಿ ಬ್ರಹ್ಮಾನಂದರು) ಶ್ರೀರಾಮಕೃಷ್ಣರ ಕೋಣೆ ಯಲ್ಲಿ ಕುಳಿತಿದ್ದರು; ಶ್ರೀರಾಮಕೃಷ್ಣರು ಮಂಚದಲ್ಲಿ ಕುಳಿತಿ ದ್ದರು; ಇವರಿಬ್ಬರೂ ನೆಲದ ಮೇಲೆ ಚಾಪೆಯಲ್ಲಿ ಕುಳಿತಿದ್ದರು. ಸಾಯಂಕಾಲವಾಗುತ್ತಿದ್ದಂತೆ ಮಂದಿರದಲ್ಲಿ ಆರತಿಯಾಗುತ್ತಿದೆ, ಗಂಟೆ, ವಾದ್ಯಗಳು ಮೊಳಗತೊಡಗಿದವು. ಅವರಿಬ್ಬರೂ ಆರತಿ ನೋಡಲು ಕಾತರಗೊಂಡರು. ಆಗ ಅವರು ತಮ್ಮ ಮುಂದೆ ಕಾಳೀಮಾತೆಯನ್ನೇ ಕಂಡರು. ಠಾಕೂರರು ಬ್ರಹ್ಮಾನಂದರಿಗೆ ಹೇಳಿದರು, ''ನೀನು ವ್ರಜಕುಲದ ರಾಖಾಲ, (ಗೋಕುಲದ ಗೋಪಾಲ ಬಾಲಕ), ನಿನ್ನ ಮೇಲೆ ನನಗೆ ವಾತ್ಸಲ್ಯ ಭಾವವಿದೆ.'' ಆಗ ಯೋಗಿನ್‌ಮಾ ಹೇಳಿದರು, ''ಠಾಕೂರರು ತಮ್ಮ ಕೋಣೆಯ ಆಗ್ನೇಯ ದಿಕ್ಕಿನ ವರಾಂಡದಲ್ಲಿ ನಡೆದಾಡುತ್ತಿದ್ದುದನ್ನು ಮಥುರ ಬಾಬು ಕಂಡಿದ್ದ. ಠಾಕೂರರು ಎದುರಿಗೆ ಬಂದಾಗ ಶಿವನಂತೆ ಕಂಡರು; ಹಿಂದಿರುಗಿ ಹೋಗುವಾಗ ಕಾಳಿಯಂತೆ ಕಂಡರು- ಹರಡಿದ ಕೂದಲಿನೊಂದಿಗೆ. ಯಾರು ರಾಮನಾಗಿದ್ದನೋ, ಯಾರು ಕೃಷ್ಣನಾಗಿದ್ದನೋ, ಅವನೇ ಈಗ ರಾಮಕೃಷ್ಣನಾಗಿ ದ್ದಾನೆ. ಭಗವಂತನು ಯೋಗಮಾಯೆಯೊಂದಿಗೆ ಸೇರಿಕೊಂಡು ಅವತರಿಸಿದ್ದಾನೆ. ಅಯಾನ್ ಘೋಷ್‌ನ ತಂಗಿ ಅವನಿಗೆ ಒಂದು ಸುದ್ದಿಯನ್ನು ತಿರುಚಿ ಹೇಳಿದಳು: ಅವನ ಪತ್ನಿ ರಾಧಾಕೃಷ್ಣ ರೊಂದಿಗೆ ಕಾಡಿನಲ್ಲೇ ಹೊರಟುಹೋದಳು ಎಂಬುದಾಗಿ. ಅದನ್ನು ಕೇಳಿದ ಅಯಾನ್ ಕೈಯಲ್ಲಿ ಕತ್ತಿ ಹಿಡಿದುಕೊಂಡು ಹೋದ, ಕೇಳಿದ ಮಾತು ನಿಜವೇ ಆಗಿದ್ದರೆ ರಾಧೆಯನ್ನು ಕತ್ತರಿಸಿ ಹಾಕುತ್ತೇನೆ ಎಂದು. ಅಲ್ಲಿಗೆ ಹೋಗಿ ನೋಡಿದರೆ, ರಾಧಾರಾಣಿ ಖಡ್ಗ-ಮುಂಡಧಾರಿ ಕಾಳೀಮಾತೆಯ ಪೂಜೆ ಮಾಡುತ್ತಿದ್ದಳು. ಅವಳು ಹೇಳಿದಳು, 'ಯಾರು ಬಾಗಿ ನಿಂತ ಕೃಷ್ಣನೋ, ಅವನೇ ನೋಡು ಕಪಾಲಿನಿ' ಎಂದು. ಶ್ರೀಕೃಷ್ಣನಲ್ಲಿ ತನ್ನ ಇಷ್ಟದೇವತೆ ಯನ್ನು ಕಂಡು ಆನಂದಗೊಂಡ ಅಯಾನ್ ಮನೆಗೆ ಮರಳಿದ.

''ಯೋಗಮಾಯೆಯೊಂದಿಗೆ ಸೇರಿಕೊಂಡ ಅವತಾರಗಳೆಂ ದರೆ ಶ್ರೀಕೃಷ್ಣ, ಶ್ರೀಚೈತನ್ಯ ಹಾಗೂ ಶ್ರೀರಾಮಕೃಷ್ಣರು — ಇವರನ್ನು ಬಿಟ್ಟರೆ ಬೇರೆ ಯಾವುದೇ ಉಲ್ಲೇಖವಿಲ್ಲ. ಚಂದ್ರ ಶೇಖರನ ಮನೆಯಲ್ಲಿ ಶ್ರೀಚೈತನ್ಯರು ಚಂಡೀರೂಪವನ್ನು ಧರಿಸಿ ದರು :

---

೨ ಪೂಜೆಗೆ ಬಳಸುವ ಪಾತ್ರೆಗಳು. *(–ಅನು)*

ಒಂದು ಕ್ಷಣ ಚೈತನ್ಯ ಗೋಪೀನಾಥರ ಹಿಡಿದ
ಅವನೊಡನೆ ಕುಳಿತ ಮಹಾಲಕ್ಷ್ಮಿಯ ಪೀಠದಲಿ
ಮುಂದುಗಡೆ ಕುಳಿತಿದ್ದ ಜನರೆಲ್ಲ ಕೈಮುಗಿಯೆ
'ನನ್ನ ಸ್ತುತಿಸಿರಿ' ಎಂದ ಗೌರಾಂಗ ಶ್ರೀಹರಿ;
ಜಗಜ್ಜನನಿಯಾವೇಶವನು ಅರಿತ ಜನರೆಲ್ಲ
ಶ್ರೀಮಹಾಪ್ರಭು ಕೇಳೆ, ಸ್ತುತಿಸಿದರು ಕೆಲಕೆಲರು
ಲಕ್ಷ್ಮಿಯನು ನುತಿಸಿದರು, ಚಂಡಿಯನು ಕೆಲಕೆಲರು
ಅವರವರ ಮತಿಯಂತೆ ಸ್ತುತಿಸಿದರು.

*(ಶ್ರೀಚೈತನ್ಯ ಭಾಗವತ, ಮಧ್ಯಲೀಲೆ, ಅಧ್ಯಾಯ ೧೮)*

''ಆದ್ದರಿಂದಲೇ ಭಕ್ತರು ಇವರನ್ನು ಸಾಕ್ಷಾತ್ ಭಗವಂತನೆಂದೇ ಕರೆಯುತ್ತಾರೆ. ಠಾಕೂರರು ಹೇಳುತ್ತಿದ್ದರು, 'ಚೈತನ್ಯ ಹಾಗೂ ಕಾಳಿ ಒಂದೇ ಎಂಬ ಅರಿವು ಮೂಡಿದರೆ, ಆಗ ಜ್ಞಾನ ಉಂಟಾಗಿದೆ ಎಂದರ್ಥ' ಎಂದು. ಗೋಪಾಲೇರ್-ಮಾ ನಮ್ಮ ಠಾಕೂರರನ್ನು ಗೋಪಾಲನ ರೂಪದಲ್ಲೇ ಕಾಣುತ್ತಿದ್ದರು. ನೀರದ ಮಹಾರಾಜರ ತಾಯಿ ರಾಮಕೃಷ್ಣಪುರದ ತಮ್ಮ ಮನೆಯಲ್ಲಿ ತಮ್ಮ ಇಷ್ಟದೇವತೆಯಾದ ಶ್ರೀರಾಮಚಂದ್ರನ ದರ್ಶನ ಪಡೆದಿದ್ದರು. ಅವರು ಸಾಷ್ಟಾಂಗ ನಮಸ್ಕಾರ ಮಾಡಿ, ಭಗವಂತನ ಪಾದದ ಧೂಳಿಯನ್ನು ತೆಗೆದುಕೊಂಡು, ತಲೆಯೆತ್ತಿ ನೋಡಿದರೆ ಶ್ರೀರಾಮಕೃಷ್ಣರು ನಿಂತಿದ್ದಾರೆ! ಠಾಕೂರರು ನಗುತ್ತ ಕೇಳಿದರು, ''ಏನಮ್ಮಾ, ಸೊಸೆ, ಈಗ ನಿನಗೆ ನಂಬಿಕೆಯುಂಟಾಯಿತೆ?'' ಎಂದು. ಠಾಕೂರರನ್ನು ಪ್ರತ್ಯೇಕವಾಗಿಟ್ಟು ಯಾವುದೇ ದೇವದೇವಿಯರನ್ನು ಆಲೋಚಿಸುವುದು ಸಾಧ್ಯವಿಲ್ಲ. ಆ ದೇವತೆಗಳ ಆಲೋಚನೆ ಮಾಡಿದರೆ ಸಾಕು, ಠಾಕೂರರ ಮಾತು ನೆನಪಾಗುತ್ತದೆ. ನೀರದ ಮಹಾರಾಜರ ತಾಯಿಗೆ ಮೊದಲು ಛಿನ್ನಮಸ್ತಾ ದೇವಿಯ ಭಾವವುಂಟಾಗಿತ್ತು. ಹಗಲೂರಾತ್ರಿ ಕೈಯಲ್ಲಿ ತಲೆಯನ್ನು ಇಟ್ಟುಕೊಂಡಿದ್ದರು. ಠಾಕೂರರೇ ಸರ್ವದೇವದೇವೀ ಸ್ವರೂಪರು. ಕಲಿಯುಗದಲ್ಲಿ ಜೀವರುಗಳ ಪೂಜೆಯನ್ನು ಸ್ವೀಕರಿಸುವುದಕ್ಕಾಗಿ ಸರ್ವ ದೇವ-ದೇವಿಯರೂ ಅವರನ್ನು ಆಶ್ರಯಿಸಿಕೊಂಡಿದ್ದಾರೆ. ಠಾಕೂರರು ಹೀಗೆ ಹೇಳಿದ್ದಾರೆ, ''ಸೊಸೆಯಮ್ಮ (ನೀರದ ಮಹಾರಾಜರ ತಾಯಿ) ಛಿನ್ನಮಸ್ತಾ ಅಂಶದಿಂದಲೇ ಜನಿಸಿದ್ದಾಳೆ'' ಎಂದು. ಈ ಸಂದರ್ಭದಲ್ಲಿ ಇನ್ನೊಂದು ಸಂಗತಿಯನ್ನು ಕೂಡ ಉಲ್ಲೇಖಿಸಬಹುದು: ಒಂದು ದಿನ ಠಾಕೂರರ ಹಾಗೂ ಸಿದ್ಧೇಶ್ವರಿಯ ಚರಣಾಮೃತ (ತೀರ್ಥ)ವನ್ನು ಎರಡು ಪಾತ್ರಗಳಲ್ಲಿ ಪ್ರತ್ಯೇಕ ತೆಗೆದುಕೊಂಡು ಹೋಗಿ ಶ್ರೀಮಾತೆಯವರಿಗೆ ಕೊಟ್ಟಾಗ ಅವರೆಂದರು, ''ಅವರಿಬ್ಬರೂ ಒಂದೇ. ಎರಡನ್ನೂ ಮಿಶ್ರ ಮಾಡಿಕೊಡು. ಈಗಲೇ ಮಿಶ್ರಣ ಮಾಡು. ನನ್ನ ಮುಂದೆಯೇ ಮಿಶ್ರಣ ಮಾಡಿಬಿಡು.'' ಅವೆರಡನ್ನೂ ಒಂದು ಪಾತ್ರೆಯಲ್ಲಿ ಮಿಶ್ರಣಮಾಡಿದ ನಂತರವೇ ಶ್ರೀಮಾತೆಯವರಿಗೆ ಸಮಾಧಾನವಾಯಿತು.''

ಗೋಲಾಪ್-ಮಾ ಹೇಳುತ್ತಿದ್ದರು: ''ಯಾವುದಾದರೂ ಸಂದಿಗ್ಧ ಪರಿಸ್ಥಿತಿ ಒದಗಿ ಬಂದಾಗ ಶ್ರೀಮಾತೆಯವರು ಒಳ್ಳೆಯ ಜ್ಞಾನಿಯಂತೆ ವರ್ತಿಸುತ್ತಿದ್ದರು. ಠಾಕೂರರಿಗೆ ಅನಾರೋಗ್ಯವುಂಟಾದಾಗ ಅವರು ತಾರಕೇಶ್ವರದಲ್ಲಿ ವ್ರತಹಿಡಿದು ಕುಳಿತಿದ್ದರು; ಆಗ ಅವರು ಹಲವು ಮಡಕೆಗಳು ಒಡೆದ ಶಬ್ದವನ್ನು ಕೇಳಿಸಿಕೊಂಡರು. ದೇಹ ಬಿದ್ದುಹೋಗುವುದೆಂದರೆ ಪಂಚಕೋಶಗಳ ರೂಪದಲ್ಲಿರುವ ಮಡಕೆ ಒಡೆದುಹೋಗುವುದಲ್ಲದೆ ಬೇರೇನೂ ಅಲ್ಲ ಎಂದು ಅವರು ಅರಿತುಕೊಂಡರು. ಅದರ ನಡುವೆ ಏನಿತ್ತೋ ಅದು ಹಾಗೆಯೇ ಉಳಿಯಿತು. ಕೇವಲ ಭಕ್ತರಿಗಾಗಿ ಒಂದು ದಿವ್ಯಶರೀರವನ್ನು ನಿರ್ಮಿಸಿ, ಕೆಲವು ದಿನ ಲೀಲೆ ನಡೆಸಿದರು. ಆ ಶಬ್ದವನ್ನು ಕೇಳಿದೊಡನೆಯೇ ಶ್ರೀಮಾತೆಯವರಿಗೆ ಆಲೋಚನೆ ಬಂತು – ಯಾರು ಯಾರಿಗೆ ಪತಿ, ಯಾರು ಯಾರ ಪತ್ನಿ? ಅದೇ ಸಂದರ್ಭದಲ್ಲಿ ಒಂದು ದಿನ ಶ್ರೀಮಾತೆಯವರು ಕನಸಿನಲ್ಲಿ ಕಾಳೀಮಾತೆಯ ಕತ್ತು ವಕ್ರವಾಗಿದ್ದುದನ್ನು ಕಂಡರು. ಶ್ರೀಮಾತೆ ಕೇಳಿದರು, ''ಅಮ್ಮಾ ನಿನ್ನ ಕತ್ತನ್ನೇಕೆ ಬಾಗಿಸಿ ನಿಂತಿರುವೆ?'' ಅದಕ್ಕೆ ಕಾಳಿ ಹೇಳಿದಳು, ''ಅವನ (ಠಾಕೂರರ) ಅದರ (ಕತ್ತಿನ ಗಾಯ) ಕಾರಣದಿಂದ. ನನಗೂ (ಕತ್ತಿನಲ್ಲಿ) ತುಂಬಾ ನೋವು.'' ಠಾಕೂರರು ದೇಹತ್ಯಾಗ ಮಾಡಿದಾಗ ಶ್ರೀಮಾತೆ ಅಳುತ್ತಾ, ''ಅಮ್ಮಾ, ಕಾಳಿ, ನನ್ನನ್ನು ಒಬ್ಬಂಟಿಯಾಗಿ ಬಿಟ್ಟು ನೀನು ಎಲ್ಲಿಗೆ ಹೋಗಿಬಿಟ್ಟೆ?'' ಎಂದರು.''

ರಾಸಬಿಹಾರಿ ಮಹಾರಾಜರಿಗೆ [೩] ಒಂದು ಸಲ ಶ್ರೀಮಾತೆಯವರು ಹೇಳಿದರು, ''ಈ ಜಗತ್ತು ಕನಸಿನಂತೆ. ಭಾವ, ಲೀಲೆ ಇವೆಲ್ಲವೂ ಸ್ವಪ್ನವತ್. ನನ್ನೊಂದಿಗೆ ನೀನು ಮಾತನಾಡುತ್ತಿರುವೆ – ಅದೂ ಕನಸೇ. ಠಾಕೂರರೊಬ್ಬರೇ ಸತ್ಯ.'' ನಾನು ಕೇಳಿದೆ, ''ಪಂಚಕೋಶ ಒಡೆದುಹೋದರೆ, ಬ್ರಹ್ಮಸ್ವರೂಪವನ್ನು ಹೊಂದಿದಂತಲ್ಲವೇ. ಹಾಗಿದ್ದರೆ, ಲೀಲಾಶರೀರ ಎಂದು ಹೇಳುತ್ತಾರಲ್ಲ, ಅದೇನು?'' ಶ್ರೀಮಾತೆ ಹೇಳಿದರು, ''ಸಚ್ಚಿದಾನಂದವೇ ಅವರ ಸ್ವರೂಪ. ಆದರೂ ಒಂದೊಂದು ಸಲ ಅವರು ದಿವ್ಯಶರೀರವನ್ನು ನಿರ್ಮಿಸಿ, ಭಕ್ತರೊಂದಿಗೆ ಲೀಲೆಯನ್ನು ನಡೆಸುವರು.'' ಇದಕ್ಕೆ ಸಂಬಂಧಿಸಿದಂತೆ ಗೋಲಾಪ್ ಮಾ ಹೇಳಿದರು, ''ಯಾರು ಯಾವ ಹಂತದವರೋ, ಅವರಿಗೆ ತಕ್ಕಂತೆ ಶ್ರೀಮಾತೆ ಮಾತನಾಡುತ್ತಿದ್ದರು. ನನಗೆ (ಗೋಲಾಪ್- ಮಾಗೆ) ಠಾಕೂರ್ ಹೇಳುತ್ತಿದ್ದರು, ಶ್ಯಾಮ-ಜ್ಞಾನವೇ ಜ್ಞಾನ. ಉಳಿದುವೆಲ್ಲಾ ಅಜ್ಞಾನ. ಜಗತ್ತು, ಆಟ, ಲೀಲೆ — ಎಲ್ಲವೂ ಸತ್ಯವೇ'' ಅಂತ.

ನಾನು ರಾಸಬಿಹಾರಿ ಮಹಾರಾಜರಿಂದ ಕೇಳಿದ್ದೆ, ಅವರು ಒಂದು ದಿನ ಕಾಶಿಯಲ್ಲಿ ಶ್ರೀಮಾತೆಯವರನ್ನು ಕೇಳಿದ್ದರಂತೆ, ''ನನಗೆ ನಿರ್ವಾಣ ಬೇಕಿಲ್ಲ, ಅಮ್ಮಾ, ಅದು ದೊರೆತರೆ ನೀವು ಸಿಗಲಾರಿರಿ'' ಅಂತ. ಅದನ್ನು ಕೇಳಿ ಶ್ರೀಮಾತೆಯವರೆಂದರು, ''ಪೆದ್ದು ಹುಡುಗ! ನಿರ್ವಾಣವೆಂದರೆ, ಅದೇ ಶ್ರೀರಾಮಕೃಷ್ಣರ ಸ್ವರೂಪ!''

---

೩ ಶ್ರೀಮಾತೆಯವರ ಒಬ್ಬರು ಸೇವಕರು, ಸ್ವಾಮಿ ಅರೂಪಾನಂದರು. *(-ಸಂ)*

ಗೋಲಾಪ್-ಮಾ ಹೇಳಿದರು, ''ಠಾಕೂರರು ದೇಹತ್ಯಾಗ ಮಾಡಿದನಂತರ ಅವರ ಅಸ್ಥಿಯನ್ನು ಇಡುವ ವಿಷಯದಲ್ಲಿ ಭಕ್ತರ ನಡುವೆ ಗೊಂದಲವುಂಟಾಯಿತು. ಆಗ ಶ್ರೀಮಾತೆ ಹೇಳಿದರು, 'ನೋಡು, ಗೋಲಾಪ್ - ಎಂಥ ಗದ್ದಲ! ಬಂಗಾರದ ಮನುಷ್ಯರಂತಿದ್ದವರೇ ಹೊರಟುಹೋದರು, ಅವರಿದ್ದಾಗ ಕೇಳುವವರಿಲ್ಲ. ಈಗ ಅವರ ಬೂದಿಗಾಗಿ ಜಗಳ ಮಾಡುತ್ತಾರೆ!' ''

ಗೋಲಾಪ್ ಮಾ 'ಉದ್ಬೋಧನ'ದಲ್ಲಿ ತೀರಿಕೊಳ್ಳುವುದಕ್ಕೆ ಕೆಲವು ದಿನಗಳ ಮುನ್ನ ನನಗೆ ಹೇಳಿದರು, ''ನೋಡು, ಹರಿಹರ[೪] — ನನ್ನ ದೇಹ ಇನ್ನು ಉಳಿಯಲಾರದು ಎಂದು ನನಗನ್ನಿಸುತ್ತದೆ. ಒಬ್ಬಾಕೆ ಕಾವಿಬಣ್ಣದ ಬಟ್ಟೆ ಧರಿಸಿದ, ತ್ರಿಶೂಲಧಾರಿಣಿಯಾದ ಹೆಣ್ಣುಮಗಳು ನನ್ನ ಶರೀರದಿಂದ ಹೊರ ಬರುತ್ತಿದ್ದಾಳೆ. ನನ್ನ ದೇಹವಾದರೋ ಶವದಂತೆ ಬಿದ್ದುಕೊಂಡಿದೆ.''

* * *

ಶ್ರೀಮಾತೆಯವರ ದೇಹತ್ಯಾಗವಾದ ಬಳಿಕ, ತುಂಬ ನಂತರದ ಘಟನೆಯಿದು. ಒಂದು ಸಲ ನನ್ನ ಮನಸ್ಸು ತುಂಬ ಚಂಚಲವಾಗಿತ್ತು. ಧ್ಯಾನ, ಜಪ, ತಪವೆಲ್ಲವೂ ಯಾಂತ್ರಿಕವಾಗಿ ನಡೆಯುತ್ತಿದ್ದವು. ಸಮಯ ಹೀಗೇ ಕಳೆದುಹೋಗುತ್ತಿತ್ತು. ನೋಡೋಣ, ಶ್ರೀಮಾತೆ ಏನಾದರೂ ಹೇಳುತ್ತಾರೇನೋ ಎಂದು 'ಮಾಯೇರ್ ಕಥಾ' (ಕನ್ನಡದಲ್ಲಿ - 'ಶ್ರೀಶಾರದಾದೇವಿ ವಚನವೇದ') ಪುಸ್ತಕ ತೆರೆದೆ. ಅದನ್ನು ತೆರೆದ ಕೂಡಲೇ ಕಾಣಿಸಿಕೊಂಡಿತು, ''ಪ್ರತಿ ದಿನವೂ ಯಾರಿಗಾದರೂ ಭಗವಂತನ ದರ್ಶನವಾಗುವುದೆ? ಠಾಕೂರರು ಹೇಳುತ್ತಿದ್ದರು, 'ಗಾಳ ಹಾಕಿದರೆ ಕೆಲವು ದಿನ ಮೀನು ಸಿಗುತ್ತದೆ, ಕೆಲವು ದಿನ ಸಿಗಲಾರದು. ಹಾಗೆಂದುಕೊಂಡು ಪ್ರಯತ್ನಪಡದೆ ಇರಬಹುದೆ?' ಅಂತ. ಇಷ್ಟು ಚಂಚಲವಾದರೆ ಹೇಗೆ? ಏನು ದೊರಕಿದೆಯೋ ಅದರಿಂದಲೇ ಯತ್ನಿಸು. ಇನ್ನು ಯಾರಾದರೂ ಇರಲಿ, ಬಿಡಲಿ; ನಾನಂತೂ ನಿನ್ನ ತಾಯಿ ಇದ್ದೇ ಇದ್ದೇನೆ. ಠಾಕೂರರು ಹೇಳುತ್ತಿದ್ದುದು ನೆನಪಿಲ್ಲವೆ? 'ಯಾರು ತಮ್ಮ ಆಶ್ರಯ ಪಡೆದಿದ್ದಾರೋ ಅವರಲ್ಲಿ ತಾವು ಆವಿರ್ಭಾವ ಹೊಂದಿಯೇ ಹೊಂದುತ್ತಾರೆ; ಕಡೇ ಪಕ್ಷ ಕೊನೆಯ ದಿನದಲ್ಲಾದರೂ ಅವರು ತಾವಾಗಿಯೇ ಬಂದು ಕರೆದುಕೊಂಡು ಹೋಗುತ್ತಾರೆ' ಅಂತ?''

ಗದಾಧರ ಆಶ್ರಮದಲ್ಲಿದ್ದೆ. ಒಬ್ಬರು ಭಕ್ತರು ಕೇಳಿದರು: ''ಶ್ರೀಮಾತೆ ಈಗಲೂ ನಿಮಗೆ ಉಪದೇಶ ನೀಡುವರೆ?'' ನಾನು ಕತ್ತು ಅಲ್ಲಾಡಿಸುತ್ತ ಹೇಳಿದೆ, ''ನೀಡುತ್ತಾರೆ.''

''ಆದರೆ ಅವರು ಈಗ ಸ್ಥೂಲ ಶರೀರದಲ್ಲಿ ಇಲ್ಲವಲ್ಲ?''

''ಸ್ಥೂಲಶರೀರದಲ್ಲಿದ್ದಾಗ ನೀಡಿದ ಉಪದೇಶಗಳೆಲ್ಲವೂ ಪುಸ್ತಕಗಳ ರೂಪದಲ್ಲಿ ಪ್ರಕಟವಾಗಿವೆ. ಆದರೆ ಈಗ ನೀಡುವ ಉಪದೇಶಗಳು ಪ್ರತೀಕದ ರೂಪದಲ್ಲಿ - symbolic spiritual instructions (ಸಾಂಕೇತಿಕವಾದ ಆಧ್ಯಾತ್ಮಿಕ ಉಪದೇಶಗಳು). ಪ್ರತೀಕದ ಆವರಣವನ್ನು ತೆಗೆದು ಹಾಕಿದರೆ ಒಂದು ಉನ್ನತ ಸತ್ಯ ಅದರಿಂದ ಹೊರಬರುವುದು.''

''ಅದು ಹೇಗೆ?''

''ಚಟ್ಟಗಾಂವ (ಚಿಟ್ಟಗಾಂಗ್)ದಿಂದ ಕಲ್ಕತ್ತೆಯ ತನಕ ಬಾಂಬ್ ದಾಳಿ ಮಾಡಿದಾಗ, ಕಲ್ಕತ್ತೆಯಲ್ಲಿ ಯಾವುದೇ ವಸ್ತುಗಳು ಸಿಗಲಾರದೆ ಹೋದವು. ನಡುನಡುವೆ ನೀರು ಸರಬರಾಜು ಕೂಡ ನಿಂತು ಹೋಗುತ್ತಿತ್ತು. ಆಶ್ರಮವನ್ನು ಹೇಗೆ ನಡೆಸುವುದು? ಎಂಬ ಚಿಂತೆಯಾಯಿತು. ಅದರ ಮೇಲಿಂದ ಈ ಹಳೆಯ ಮನೆ (ಗದಾಧರ ಆಶ್ರಮ) ಕೂಡ ಇದೆಯಲ್ಲ? ಕನಸಿನಲ್ಲಿ ನೋಡಿದೆ, ಶ್ರೀಮಾತೆಯವರು ಗಣೇಶನನ್ನು ಮಡಿಲಲ್ಲಿ ಕುಳ್ಳಿರಿಸಿಕೊಂಡಿದ್ದರು! ಆಗ ಅರಿತುಕೊಂಡೆ - ಏನೂ ಭಯಪಡಬೇಕಿಲ್ಲ, ಶ್ರೀಮಾತೆ ಎಲ್ಲವನ್ನೂ ತಮ್ಮ ಮಡಿಲಲ್ಲಿಟ್ಟುಕೊಂಡಿದ್ದಾರೆ ಅಂತ.

''ಒಂದು ಸಲ ಕೃಷ್ಣನ ಪೂಜೆ ಮಾಡಲು ಹೊರಟೆ. ಆಗ ನೆನಪಾಯಿತು, ಶ್ರೀಮಾತೆಯವರ ಪೂಜೆಯನ್ನು ಮೊದಲೇ ಮಾಡಲಿಲ್ಲ ಅಂತ. ಅನಂತರ ಎಷ್ಟು ಸಲ ಧ್ಯಾನ ಮಾಡಿದರೂ ನೋಡುತ್ತಿದ್ದೆ, ಶಿವನ ಎದೆಯಲ್ಲಿ ಕೃಷ್ಣ ನಿಂತಿರುತ್ತಿದ್ದ! ಅನ್ನಿಸಿತು, ಶಿವನೆಂದರೆ ಜಗನ್ಮಾತೆಯ ಒಂದು ರೂಪ ಅಂತ. ಆದರೆ ಅಂದು ಮಧ್ಯರಾತ್ರಿಯಲ್ಲಿ ಧ್ಯಾನ ಮಾಡುತ್ತಿದ್ದಾಗ ನಾನು ಮೊದಲ ಬಾರಿ ಕಂಡೆ - ಶಿವನ ಎದೆಯಲ್ಲೇ ಶಿವ ನಿಂತಂತೆ - ಹುಲಿಯ ಚರ್ಮವನ್ನು ಧರಿಸಿದ್ದ; ಆದರೆ ಕೈಗಳಲ್ಲಿ ಖಡ್ಗ ಹಾಗೂ ರುಂಡ! ಆಗ ಅರ್ಥವಾಯಿತು, ಕಾಳಿ-ಕೃಷ್ಣ ಒಂದೇ, ಹಾಗೂ ಶಿವ-ಶಕ್ತಿ ಕೂಡ ಒಂದೇ ಎಂದು.'' *(ಮುಕ್ತಾಯ)*

ಭಗವಂತ ಎಲ್ಲವನ್ನೂ ಕೇಳುತ್ತಾನೆ, ಎಲ್ಲವನ್ನೂ ಅರಿಯುತ್ತಾನೆ ಎಂಬುದನ್ನು ಚೆನ್ನಾಗಿ ತಿಳಿದುಕೋ. ಅವನು ನಿನ್ನ ಪ್ರತಿಯೊಂದು ಪಿಸುನುಡಿಯನ್ನೂ ಆಲಿಸುತ್ತಾನೆ. ನಿನ್ನ ಮನಸ್ಸಿನಲ್ಲಿ ಏಳುವ ಪ್ರತಿಯೊಂದು ಆಲೋಚನೆಯೂ ಅವನಿಗೆ ತಿಳಿಯುವುದು. ವ್ಯಾಕುಲ ಮನಸ್ಸಿನಿಂದ ಅವನನ್ನು ಪ್ರಾರ್ಥಿಸಿ, ಏನನ್ನು ಕೇಳಿಕೊಂಡರೂ ಅದನ್ನು ಅವನು ಪೂರೈಸುವನು.

ಆದ್ದರಿಂದ ನಿನ್ನ ಸೀಮಿತ ಬುದ್ಧಿಶಕ್ತಿಯಿಂದ ಆಧ್ಯಾತ್ಮಿಕ ಸತ್ಯಗಳನ್ನು ಅರಿತುಕೊಳ್ಳುವ ಪ್ರಯತ್ನವನ್ನೆಲ್ಲ ಬಿಟ್ಟು ಬಿಡು. ಭಗವಂತನಲ್ಲಿ ಸಂಪೂರ್ಣ ಶ್ರದ್ಧೆಯನ್ನು ಹೊಂದಿರು; ಅವನನ್ನೇ ಅವಲಂಬಿಸಿ ಸಾಧನೆ ಮಾಡು. ವ್ಯಾಕುಲ ಹೃದಯದಿಂದ ಅವನನ್ನು ಕರೆ.

— ಸ್ವಾಮಿ ಶಾರದಾನಂದ

೪ ಹರಿಹರ ಎಂಬುದು ಲೇಖಕರ ಪೂರ್ವಾಶ್ರಮದ ಹೆಸರು; ಹರಿಹರ ಮುಖ್ಯೋಪಾಧ್ಯಾಯ ಎಂದು. *(-ಸಂ)*